500 ಆಗಲಿ 200 ರೂಪಾಯಿಗಳನ್ನಾಗಲಿ ನಿಗದಿಪಡಿಸಿ. ನೀವು ಯಾರಿಗೂ ಅಂಜಬೇಡಿ. ಆ ಒಂದು ಎದೆಗಾರಿಕೆ ತೋರಿಸಿ. ಶಾಲೆಗಳನ್ನು ನಡೆಸತಕ್ಕಂಥವರ ಯಾವುದೇ ಲಾಬಿಗೆ ಮಣಿಯಬೇಡಿ. ತಿಂಗಳಿಗೆ ಇಂಥಿಂಥ ತರಗತಿಗಳಿಗೆ ಇಂತಿಷ್ಟು ಶುಲ್ಕವೆಂದು ನಿಗದಿಪಡಿಸಬೇಕು. ನನ್ನಲ್ಲಿರುವ ಮಾಹಿತಿಯನ್ನು Speaker ರವರಿಗೆ ಕೊಡುತ್ತಿದ್ದೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ನರೇಂದ್ರಬಾಬುರವರು ಶಿಕ್ಷಣದ ಬಗ್ಗೆ ವಿಶೇಷ ಆಸಕ್ತಿ ತೆಗೆದುಕೊಂಡಿದ್ದಾರೆನ್ನುವುದು ನಮ್ಮಗೆಲ್ಲರಿಗೂ ತಿಳಿದಿರುವ ವಿಚಾರ. ಅವರು ಒಳ್ಳೊಳ್ಳೆ ಸಲಹೆ ಸೂಚನೆ ಕೊಡುತ್ತಿದ್ದಾರೆ ಅವುಗಳನ್ನೆಲ್ಲವನ್ನು ಸ್ವೀಕರಿಸುವುದಕ್ಕೆ ಸಿದ್ಧನಿದ್ದೇನೆ. ವೈಯಕ್ತಿಕವಾಗಿಯೂ ಅವರ ಜೊತೆ ಮಾತನಾಡಿ ಸಲಹೆಗಳನ್ನು ತೆಗೆದುಕೊಂಡು ನಮ್ಮ ಇಲಾಖೆಯ ಯಶಸ್ಸಿಗೆ ಅವರ ಸಲಹೆಗಳನ್ನು ತೆಗೆದುಕೊಂಡು ಚರ್ಚೆ ಮಾಡುತ್ತೇನೆ.

**ಭಟ್ಕಳ ತಾಲ್ಲೂಕಿನ ಪುರವರ್ಗ ಗ್ರಾಮದಲ್ಲಿರುವ ಎನ್.ಜಿ.ಡಿ. ಪ್ರೌಢ ಶಾಲೆಗೆ ಯಾವುದೇ ಮೂಲಭೂತ ಸೌಕರ್ಯಗಳು ಇಲ್ಲದಿರುವ ಬಗ್ಗೆ**

**974 ಶ್ರೀ ಜೆ.ಡಿ. ನಾಯ್ಕ :**–ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಭಟ್ಕಳ್ ತಾಲ್ಲೂಕಿನ ಪುರವರ್ಗ ಗ್ರಾಮದಲ್ಲಿರುವ ಎನ್.ಜಿ.ಡಿ. ಪ್ರೌಢಶಾಲೆಗೆ ಯಾವುದೇ ಮೂಲಭೂತ ಸೌಕರ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಪ್ರೌಢಶಾಲೆಗೆ ಕಟ್ಟಡ, ಆಟದ ಮೈದಾನ, ವಾಚನಾಲಯ ಹಾಗೂ ಇತರೆ ಸೌಲಭ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) 2009–10ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೂನ್ಯ ಫಲಿತಾಂಶ ಬಂದಿದ್ದಾಗ್ಯೂ ಇಂತಹ ಶಾಲೆಗಳಿಗೆ ಸರ್ಕಾರ ನೀಡುತ್ತಿರುವ ಅನುದಾನವೆಷ್ಟು ;

ಈ) ಸದರಿ ಅನುದಾನ ಪಡೆದ ಶಾಲೆಗಳು ಉತ್ತಮಗೊಳ್ಳದಿರುವುದರಿಂದ ಇಂತಹ ಶಾಲೆಗಳ ಅನುದಾನ ನಿಲ್ಲಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :–**

ಅ) ಇಲ್ಲ

ಆ) ಈ ಪ್ರೌಢಶಾಲೆಯು ಆರ್.ಸಿ.ಸಿ. ಕಟ್ಟಡ ಹೊಂದಿದ್ದು 3 ತರಗತಿ ಕೋಣೆಗಳು 1 ಕಛೇರಿ ಕೊಠಡಿ ಇರುತ್ತದೆ. ಶಾಲೆಯಲ್ಲಿ ಕುಡಿಯವ ನೀರಿನ ಸೌಲಭ್ಯವಿದೆ. ಪೀಠೋಪಕರಣ, ಕ್ರೀಡೋಪಕರಣ, ಆಟದ ಮೈದಾನ ಹಾಗೂ ವಿಜ್ಞಾನ ಉಪಕರಣಗಳು ಮತ್ತು ವಾಚನಾಲಯ ಇದ್ದು ಮೂಲಭೂತ ಸೌಲಭ್ಯಗಳನ್ನು ಹೊಂದಿರುತ್ತದೆ.

ಇ) ಖಾಸಗಿ ಪ್ರೌಢಶಾಲೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವಾಗ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಲು ಪ.ಜಾ./ಪ.ಒಂ.ಡ ಆಡಳಿತ ಮಂಡಳಿಗಳಿಗೆ 03 ವರ್ಷಗಳ ಕಾಲಾವಕಾಶವನ್ನು ಮತ್ತು ಸಾಮಾನ್ಯ ವರ್ಗ/ ಹಿಂದುಳಿದ ವರ್ಗ/ಅಲ್ಪಸಂಖ್ಯಾತ ವರ್ಗದ ಆಡಳಿತ ಮಂಡಳಿಗಳಿಗೆ ಸರ್ಕಾರದ ಆದೇಶ ಸಂಖ್ಯೆ ಇಡಿ 127 ಎಸ್ಇಪಿ 2008 ದಿನಾಂಕ : 24-02-2009 ರ ಆದೇಶದನ್ವಯ 02 ವರ್ಷಗಳ ಕಾಲಾವಕಾಶವನ್ನು ನೀಡಲಾಗಿದೆ. ಎರಡು ವರ್ಷಗಳ ಕಾಲಾವಕಾಶವನ್ನು ನೀಡಲಾಗಿದೆ. ಎರಡು ವರ್ಷಗಳಲ್ಲಿ ಫಲಿತಾಂಸ ಉತ್ತಮಗೊಳ್ಳದಿದ್ದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.

ಈ) ಖಾಸಗಿ ಪ್ರೌಢಶಾಲೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸಬೇಕಾದಲ್ಲಿ ಸರ್ಕಾರದ ಆದೇಶ ಸಂಖ್ಯೆ ಇಡಿ 59 ಪಿಎಂಸಿ 2006, ದಿನಾಂಕ 06-10-2007 ರಲ್ಲಿ ನಿಗದಿ ಪಡಿಸಿರುವಂತೆ ಮೂಲಭೂತ ಸೌಲಭ್ಯಗಳಾದ ಕಟ್ಟಡ, ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ, ಪ್ರಯೋಗಶಾಲೆ ಮತ್ತು ಕುಡಿಯುವ ನೀರು ಶೌಚಾಲಯ, ವಿದ್ಯುತ್ ಸೌಲಭ್ಯ, ಆಟದ ಮೈದಾನ ಮುಂತಾದ ಸೌಲಭ್ಯಗಳನ್ನು ಕಡ್ಡಾಯವಾಗಿ ಹೊಂದಿರುಬೇಕಾಗಿದೆ. ಆದಾಗ್ಯೂ ಈ ಮೂಲಭೂತ ಸೌಲಭ್ಯಗಳಲ್ಲಿ ಸ್ವಂತ ಕಟ್ಟಡ ಹಾಗೂ ಆಟದ ಮೈದಾನಕ್ಕೆ ಸಂಬಂಧಿಸಿದಂತೆ 03 ವರ್ಷಗಳ ಕಾಲಾವಕಾಶವನ್ನು ನೀಡಲಾಗಿದೆ. ನಿಗದಿತ ಕಾಲಾವಧಿಯಲ್ಲಿ ಈ ಸೌಲಭ್ಯಗಳನ್ನು ಒದಗಿಸಲು ವಿಫಲವಾದಲ್ಲಿ ಸಹಾಯಾನುದಾನವನ್ನು ನಿಲ್ಲಿಸುವ ಬಗ್ಗೆ ಪರಿಶೀಲಿಸಲಾಗುವುದು.

**ಶ್ರೀ ಜೆ.ಡಿ. ನಾಯ್ಕ** : ನಾನು ಕೇಳಿದ ಪ್ರಶ್ನೆಗೆ ಸಚಿವರು ಉತ್ತರಿಸಿದ್ದಾರೆ. ಆದರೆ, ಸಂಬಂಧಪಟ್ಟ DDPI, BEO ಗಳು ನೋಡಿದ ಹಾಗೆ ಕಾಣುತ್ತಿಲ್ಲ. ಒಂದು ಗುಂಟೆ ಜಾಗ ಸಹ ಸಂಬಂಧಪಟ್ಟ ಶಿಕ್ಷಣಸಂಸ್ಥೆಗೆ ಇಲ್ಲ. ಯಾವುದೋ ಜಾಗದಲ್ಲಿ ಖಾಸಗಿ ವ್ಯಕ್ತಿಗಳು ಅತಿಕ್ರಮಣ ಮಾಡಿಕೊಂಡು ಶಾಲೆ ನಡೆಸಿಕೊಂಡು ಬರುತ್ತಿದ್ದಾರೆ. ಅಲ್ಲಿ ಕಟ್ಟಡವಿಲ್ಲ, ಶೌಚಾಲಯ ಇಲ್ಲ, ವಾಚನಾಲಯ ಇಲ್ಲ, ಕುಡಿಯುವ ನೀರಿನ ಸೌಲಭ್ಯವಿಲ್ಲ. ಸರ್ಕಾರಿ ಮಾರ್ಗಸೂಚಿ ಪ್ರಕಾರ ಒಂದು ಕ್ಲಾಸ್‌ನಲ್ಲಿ 30-40 ಮಕ್ಕಳಿರಬೇಕು. ಆದರೆ, ಅಲ್ಲಿರುವ ಮಕ್ಕಳ ಪ್ರಮಾಣ 5-10. ಆ ಬಗ್ಗೆ ಕೂಡ ಸರಿಯಾದ ಉತ್ತರ ಕೊಟ್ಟಿಲ್ಲ. ಅವರು ಅನುದಾನದ ಬಗ್ಗೆ ಹೇಳಿಲ್ಲ. SC/ST ಶಾಲೆಗಳಿಗೆ 3 ವರ್ಷ ಅವಕಾಶ ಕೊಟ್ಟಿದ್ದೇವೆ, ಜನರಲ್, ಓಬಿಸಿಯವರಿಗೆ ಎರಡು ವರ್ಷಗಳ ಅವಕಾಶ ಕೊಟ್ಟಿದ್ದು ಸರಿ ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ. ನನ್ನ ಕೋರಿಕೆ ಏನೆಂದರೆ, ಈ ರೀತಿಯಾದರೆ ಶಿಕ್ಷಣದ ಗುಣಮಟ್ಟ ಯಾವ ರೀತಿಯಾಗುತ್ತದೆ? ಯಾವುದೇ ಮೂಲಭೂತ ಸೌಕರ್ಯಗಳಿಲ್ಲದಿದ್ದರೆ ಹೇಗೆ?

**ಅಧ್ಯಕ್ಷರು :** ನೀವು ಉಪ ಪ್ರಶ್ನೆ ಕೇಳಿ ಎಂದರೆ ಮತ್ತೆ ಮತ್ತೆ ಕೇಳಿದ್ದನ್ನೇ ಕೇಳುತ್ತೀರಿ.

**ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ :** ನಮ್ಮ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಎನ್‌ಜೆಡಿ ಶಾಲೆಯ ಬಗ್ಗೆ ಒಳ್ಳೆಯ ಪ್ರಶ್ನೆ ಕೇಳಿದ್ದಾರೆ. ನಾನೊಂದು ಸ್ಪಷ್ಟಪಡಿಸುತ್ತೇನೆ. 1991–92ರಲ್ಲಿ ಈ High school ಗೆ ಅನುಮತಿ ಸಿಕ್ಕಿತು. ಈಗ ಸುಮಾರು 103 ವಿದ್ಯಾರ್ಥಿಗಳು ಆ ಶಾಲೆಯಲ್ಲಿ ಓದುತ್ತಿದ್ದಾರೆ. ಅವರಿಗೆ 7 ಎಕರೆ 9 ಗುಂಟೆ ಜಮೀನಿದೆ. ಆದರೆ, ಆ ಬಗ್ಗೆ D.C. Court ನಲ್ಲಿ ಕೇಸ್ ನಡೆಯುತ್ತಿದೆ. ಸರ್ಕಾರದ ಮಾಹಿತಿಗಳನ್ನಾಧರಿಸಿ, ದಾಖಲೆಗಳನ್ನು ಆಧರಿಸಿ ಹೇಳುತಿದ್ದೇನೆ. ಆದರೆ, ಈ ಶಾಲೆಗೆ ಮೂಲಭೂತ ಸೌಕರ್ಯಗಳಿಲ್ಲ. ಹಾಗಾಗಿ, ಸೌಲಭ್ಯಗಳಿಲ್ಲವೆನ್ನುವುದು ಮತ್ತು ಅಲ್ಲಿ ಸರಿಯಾಗಿ ಶೈಕ್ಷಣಿಕ ಚಟುವಟಿಕೆ ನಡೆಯುತಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಏಕೆಂದರೆ, ಈ ವರ್ಷ SSLC ಯಲ್ಲಿ zero result ಬಂದಿದೆ. ಕಳೆದ ಎರಡು ವರ್ಷಗಳ result ಸಹ 20% 40% ಇದೆ. ಹಾಗಾಗಿ, ಈ High school ನಲ್ಲಿ ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲವೆನ್ನುವದು ನಿಶ್ಚಿತವಾಗಿದೆ. ಆದರೆ, ಅದು grant-in-aid ಸಂಸ್ಥೆಯಲ್ಲ. Grant-in-aid ಗೆ ಪ್ರಸ್ತಾವನೆ ಇನ್ನೂ ಸರ್ಕಾರಕ್ಕೆ ಬಂದಿಲ್ಲ. ಅಲ್ಲಿ ಉತ್ತಮವಾದ ಶಿಕ್ಷಣದ ಗುಣಮಟ್ಟ ಹೆಚ್ಚಿಸುವುದಕ್ಕೆ ಆ ಸಂಸ್ಥೆಗೆ ಏನೆಲ್ಲ ಎಚ್ಚರಿಕೆ ಕೊಡಬೇಕೋ ಅದನ್ನು ಕೊಡುತ್ತೇವೆ. ಮೂಲಭೂತ ಸೌಕರ್ಯಗಳನ್ನು ಹೊಂದುವುದಕ್ಕೆ ಬೇಕಾಗಿರುವಂಥ ಅಗತ್ಯ ನಿರ್ದೇಶನವನ್ನು ಆ ಸಂಸ್ಥೆಗೆ ಕೊಡುತ್ತೇವೆ. ತಾವು ಅಲ್ಲಿ ಉಲ್ಲೇಖಿಸಿದಂತೆ, ಗುಣಮಟ್ಟದ ಶಿಕ್ಷಣ ಸಿಗಬೇಕು. ಹಾಗಾದಾಗ ಮಾತ್ರ ಅಲ್ಲಿ ನಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಸಿಗುವುದಕ್ಕೆ ಸಾಧ್ಯವಾಗುತ್ತದೆ. ನಿಮ್ಮ ಕಾಳಜಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಸಂಸ್ಥೆಯನ್ನು ಉತ್ತಮಪಡಿಸುವುದಕ್ಕೆ ಬೇಕಾಗಿರುವಂಥ ನಿರ್ದೇಶನವನ್ನು ನಾನು ಕೊಡುತ್ತೇನೆ. ಅದಕ್ಕೂ ಮೀರಿ ಅವರು ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲಿಲ್ಲವೆಂದರೆ ಆ ಸಂಸ್ಥೆಗೆ ನಾವು ನಿರ್ದಾಕ್ಷಣ್ಯವಾದಂಥ, ಬಿಗುವಾದ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

**ಅಧ್ಯಕ್ಷರು :** ಅದು un aided school. ಅದನ್ನು ಏನು ಮಾಡಬೇಕೆಂದು ಹೇಳಿದ್ದಾರೆ. ರುದ್ರೇಗೌಡರವರೆ, ತಾವು ಕುಳಿತುಕೊಳ್ಳಿ. ಅದು un aided institution. ಅದು ಸರ್ಕಾರಿ ಶಾಲೆಯಲ್ಲ.

**ಶ್ರೀ ಜೆ.ಡಿ. ನಾಯ್ಕ :** ಈ ವರ್ಷ SSLC ಯಲ್ಲಿ zero percent result ಇದೆ. ನೀವು Grant ಕೊಡುತ್ತೀರಿ ಎಂದು ಅಲ್ಲಿನ management ರವರು ಶಿಕ್ಷಕರಿಂದ 5 ಲಕ್ಷ, 6 ಲಕ್ಷ ರೂಪಾಯಿ, 10 ಲಕ್ಷ ರೂಪಯಿ ಕೊಡಿ ಎಂದು ಹೇಳುತ್ತಿದ್ದಾರೆ. ಹೀಗಾದರೆ, ಗುಣಮಟ್ಟದ ಶಿಕ್ಷಣ ಕೊಡಲಿಕ್ಕಾಗುವುದಿಲ್ಲ. ಅದಕ್ಕೂ ಮೀರಿ ನೀವು grant ಕೊಟ್ಟರೆ ಅಲ್ಲಿ

ಶಿಕ್ಷಕರ ಹುದ್ದೆಗಳನ್ನು ಹರಾಜು ಹಾಕುವಂಥ ಪ್ರಕ್ರಿಯೆ ನಡೆಯುತ್ತಿದೆ. ಇಲ್ಲವೆಂದರೆ, ನೀವು grant ಕೊಡಲಿಕ್ಕೆ ಹೋಗಬೇಡಿ. ಅದನ್ನು ಮುಚ್ಚುವ ವ್ಯವಸ್ಥೆ ಮಾಡಿ ಎಂದು ವಿನಂತಿ ಮಾಡುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ :** Grant ಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ. ಪ್ರಸ್ತಾವನೆಗಳು ಬಂದಿಲ್ಲ. ಅವರಿಗೆ grant-in-aid ಕೇಳುವುದಕ್ಕೆ ಅರ್ಹತೆ ಇದೆ. ಆದರೆ, ಆ ಪ್ರಸ್ತಾವನೆ ನಮ್ಮ ಸರ್ಕಾರಕ್ಕೆ ಇನ್ನೂ ಬಂದಿಲ್ಲ. ಅವರು ಅಲ್ಲಿ ಸ್ಥಿತಿಯನ್ನು ಸುಧಾರಿಸಿಕೊಳ್ಳದೇ ಹೋದರೆ, ಗುಣಮಟ್ಟದ ಶಿಕ್ಷಣವನ್ನು ಕೊಡುವಂಥ ಸ್ಥಿತಿಯನ್ನು ನಿರ್ಮಿಸಿಕೊಳ್ಳದಿದ್ದರೆ, ಕಟ್ಟಡಗಳು, ಉಳಿದೆಲ್ಲ ಸೌಲಭ್ಯಗಳು, ಶಿಕ್ಷಕರು, ಇತ್ಯಾದಿಗಳನ್ನು ಚೆನ್ನಾಗಿ ಮಾಡಿಕೊಳ್ಳದಿದ್ದರೆ ಅದು ನಮ್ಮ ಜಿಲ್ಲೆಯ High school ಹೌದು, ಅ ಹಿನ್ನೆಲೆಯಲ್ಲಿಯೂ ಸಹ ಶಿಕ್ಷಣ ಸಚಿವನಾಗಿ ನಿಶ್ಚಿತವಾಗಿ ನಾನು ನಮ್ಮ ಎನ್‌ಜೆಡಿ ಪ್ರೌಢಶಾಲೆಯ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾದ ಕ್ರಮ ತೆಗೆದುಕೊಳ್ಳತ್ತೇನೆ. ಕೇವಲ grant-in-aid ಗೆ ಒಳಪಡಿಸುವುದಕ್ಕೋಸ್ಕರವಾಗಿ ಸಂಸ್ಥೆ ನಡೆಸಿ, ಶಿಕ್ಷಕರಿಗೆ ತೊಂದರೆ ಕೊಡುವುದಕ್ಕೆ ಮುಂದಾದರೆ ನಾವು ಅಗತ್ಯ ಎಚ್ಚರಿಕೆಯನ್ನು ಆ ಸಂಸ್ಥೆಗೆ ನೀಡುತ್ತೇವೆ.

**ಕುಡಿಯುವ ನೀರಿನ ಅಭಾವದ ಬಗ್ಗೆ**

**120 (870) ಶ್ರೀ ರಾಮಚಂದ್ರ ಎಸ್.ವಿ. (ಜಗಳೂರು) :**–ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಜಗಳೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ; ಇದಕ್ಕಾಗಿ ಎಂದು ಹಣ ಬಿಡುಗಡೆ ಮಾಡಲಾಗುವುದು; (ವಿವರ ನೀಡುವುದು)?

a) Has it come to the notice of Government that, there is drinking water scarcity in the jurisdiction of Jagalur Constituency;

**ಶ್ರೀ ಜಗದೀಶ್ ಶೆಟ್ಟರ್** (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :–

ಅ) ಬಂದಿದೆ.

ಆ) ಕೇಂದ್ರ ಸರ್ಕಾರದ ಪುನರ್ರಚಿತ ಮಾರ್ಗದರ್ಶಿಗಳ ಪ್ರಕಾರ ಗಣಕೀಕರಣ